ಓ ಎಸ್ ನಂ.**247/2013**
ಪಿಡಬ್ಲ್ಯೂ.**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **11.06.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ **1** ರವರ ಪರವಾಗಿ ಶ್ರೀ ಟಿ ಜಿ ವಿ ವಕೀಲರಿಂದಃ-

ನಾನು **7** ನೇ ತರಗತಿ ತನಕ ವಿದ್ಯಾಬ್ಯಾಸ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸ್ವಲ್ಪ ಮಟ್ಟಿಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನಾನು **7** ನೇ ತರಗತಿಯ ತನಕ ವಿದ್ಯಾಭ್ಯಾಸ ಮಾಡಿದ್ದೇನೆಂದು ದಾವಾ ಪತ್ರದಲ್ಲಾಗಲೀ, ಪ್ರಮಾಣ ಪತ್ರದಲ್ಲಾಗಲೀ ಬರೆಸಿಲ್ಲ. ನಾನು ಈ ರೀತಿ ಬರೆಸಿದ್ದರೂ ಕೂಡ ಬರೆಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಿರುದ್ದ ಈ ಕೇಸನ್ನು ಹಾಕಿದ್ದೇನೆ. ಸಾಕ್ಷಿಯು ಪ್ರತಿವಾದಿಗಳ ಹೆಸರನ್ನು ಹೇಳಿರುತ್ತಾರೆ. ನಾನು, ಹನುಮಕ್ಕ ಮತ್ತು ಮುನಿತಾಯಮ್ಮ ಈ ಕೇಸನ್ನು ಹಾಕಿದ್ದೇವೆ. ನಾನು ಅವರಿಬ್ಬರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆಂದು ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಗೊತ್ತಿಲ್ಲ.

ನನ್ನ ಗಂಡನಿಗೆ ಮೂರು ಜನ ಹೆಂಡತಿಯರು. ಅವರೆಂದರೆ ವಾದಿಯರು ಎಂದರೆ ಸರಿ. ನನ್ನ ಗಂಡನ ಮೊದಲನೇ ಹೆಂಡತಿ ಮುನಿತಾಯಮ್ಮ, **2** ನೇ ಹೆಂಡತಿ ಹನುಮಕ್ಕ ಹಾಗೂ **3** ನೇ ಹೆಂಡತಿ ನಾನು ಎಂದರೆ ಸರಿ. ನನ್ನ ಗಂಡನ ತಮ್ಮನ ಹೆಸರು ಮುನಿರಾಜಪ್ಪ ಎಂದರೆ ಸರಿ. ಮುನಿರಾಜಪ್ಪನ ಮಗನೇ **1** ನೇ ಪ್ರತಿವಾದಿ ಎಂದರೆ ಸರಿ. **1** ನೇ ವಾದಿ ತಮ್ಮಣ್ಣಪ್ಪ ಎಂಬ ತಮ್ಮನಿದ್ದಾನೆ ಎಂದರೆ ಸರಿ. **2** ನೇ ವಾದಿಯು ಸದರಿ ತಮ್ಮಣ್ಣಪ್ಪನ ಮಗ ಎಂದರೆ ಸರಿ. **1** ಮತ್ತು **2** ನೇ ವಾದಿಯರು ಸ್ವಂತ ಅಕ್ಕ ತಂಗಿಯರು ಎಂದರೆ ಸರಿ. **2** ನೇ ವಾದಿಯ ತಂಗಿಯ ಮಗ ಅಂಜನಪ್ಪ ಎಂದರೆ ಸರಿ. ಸದರಿ ಅಂಜನಪ್ಪನ ಮಗನೇ **3** ನೇ ಪ್ರತಿವಾದಿ ಮಾರುತಿ ಎಂದರೆ ಸರಿ. ನನ್ನ ಗಂಡನ ತಂಗಿಯ ಮಗ ಚಿಕ್ಕ ಸುಬ್ಬಣ್ಣ ಎಂದರೆ ಸರಿ. ಸದರಿ ಚಿಕ್ಕಸುಬ್ಬಣ್ಣನ ಮಗನೇ **4** ನೇ ಪ್ರತಿವಾದಿ ರಮೇಶ ಎಂದರೆ ಸರಿ. ನನ್ನ ಗಂಡನ

ಅಕ್ಕನ ಮಗ ನಾರಾಯಣಪ್ಪ ಎಂದರೆ ಸರಿ. ಸದರಿ ನಾರಾಯಣಪ್ಪನವರ ಮಗನೇ 5 ನೇ ಪ್ರತಿವಾದಿ ಆನಂದ್ ಕುಮಾರ್ ಎಂದರೆ ಸರಿ.

ನಾವು ದಾವಾ ಪತ್ರದಲ್ಲಿ ವಾದಿಯರು ಮತ್ತು ಪ್ರತಿವಾದಿಯರೆಲ್ಲಾ ಒಟ್ಟಿಗೆ ಇದ್ದೇವೆಂದು ತಿಳಿಸಿಲ್ಲ. ಪ್ರತಿವಾದಿಯರು ನಮ್ಮ ಸಂಬಂದಿಕರು ಎಂದು ದಾವೆಯಲ್ಲಿ ತೋರಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ. ಸಾಮಾನ್ಯವಾಗಿ ಯಾವುದೇ ದಾಖಲೆಗೆ ಸಹಿ ಮಾಡುವಾಗ ಓದಿಸಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ನಾನು ನಮ್ಮ ಜಮೀನು ನಮಗೆ ಬಿಟ್ಟು ಕೊಡಿ ಎಂದು ಪರಿಹಾರ ಕೇಳಿರುತ್ತೇನೆ. ನಾವು ಮೂರು ಜನ ವಾದಿಯರು 2 ನೇ ಪ್ರತಿವಾದಿ ಜೊತೆ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಭಾಗಕ್ಕೆ ಬಂದ 2 ಎಕರೆ ಜಮೀನಿನಲ್ಲಿ ನಾನು ಜೋಳ ಬೆಳೆಯುತ್ತಿದ್ದೇನೆ. ಸದರಿ ಜಮೀನಿನ ವ್ಯವಸಾಯವನ್ನು ನಾನು ಮತ್ತು 2 ನೇ ಪ್ರತಿವಾದಿ ಸೇರಿಸಿ ಮಾಡಿಸುತ್ತಿದ್ದೇವೆ ಎಂದರೆ ಸರಿಯಲ್ಲ ನಾನು ಒಬ್ಬಳೇ ಮಾಡಿಸುತ್ತಿದ್ದೇನೆ. ಈ ದಾವೆಯ ವ್ಯಾಜ್ಯ ಕಾರಣ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ನಮ್ಮ 2 ಎಕರೆ ಜಮೀನನ್ನು 1 ಮತ್ತು 5 ನೇ ಪ್ರತಿವಾದಿಯರು ವ್ಯವಸಾಯ ಮಾಡಲು ಬಂದಿದ್ದರು ಹಾಗಾಗಿ ಈ ಕೇಸನ್ನು ಹಾಕಿರುತ್ತೇನೆ. ನನ್ನ ಜಮೀನಿಗೆ 1 ಮತ್ತು 5 ನೇ ಪ್ರತಿವಾದಿಯರು ಯಾವುದೇ ರೀತಿ ವ್ಯವಸಾಯ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಬಲವಂತವಾಗಿ ನಮ್ಮ ಮೂಲಕ ಕೇಸನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಅವರೆ ನನ್ನನ್ನು ಪ್ರತಿ ಸಲ ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಾರೆ ಎಂದರೆ ಸರಿಯಲ್ಲ.

ನಾನು ದಿನಾಂಕಃ 20.02.2008 ರ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಪ್ರತಿವಾದಿಯರು ನಮ್ಮನ್ನು ಬಲವಂತವಾಗಿ ಕರೆದುಕೊಂಡು ನೊಂದಣಿ ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದಾರೆಂದು ದಾವಾ ಪತ್ರದಲ್ಲಿ ತಿಳಿಸಿದ್ದೀರಾ ಎಂದರೆ ಹೌದು. ಯಾವ

ದಿನಾಂಕದಂದು ಹಾಗೂ ಯಾವ ಸ್ಥಳದಲ್ಲಿ ಈ ರೀತಿ ಬಲವಾಗಿ ಸಹಿ ಮಾಡಿಸಿಕೊಂಡಿದ್ದಾರೆಂದು ಹೇಳಲು ಆಗುವುದಿಲ್ಲ. ವಿಭಾಗ ಪತ್ರ ತಯಾರಿಸಿದ ಪತ್ರ ಬರಹಗಾರರ ಹೆಸರು ನನಗೆ ಗೊತ್ತಿಲ್ಲ. ನನ್ನ ಹತ್ತಿರ ಒಂದು ವಿಭಾಗ ಪತ್ರದ ಮೂಲ ಪ್ರತಿ ಇದೆ ಎಂದರೆ ಸರಿ. ನೀವು ನೊಂದಣಿ ಸಮಯದಲ್ಲಿ ಈ ರೀತಿ ಬಲವಂತವಾಗಿ ಕರೆದುಕೊಂಡು ಬಂದಿದ್ದಾರೆಂದು ಪತ್ರ ಬರಹಗಾರರಿಗೆ ಹೇಳಿದ್ದೀರಾ? ಎಂದರೆ ಇಲ್ಲ. ದಿನಾಂಕಃ **20.02.2008** ರಂದು ಈ ರೀತಿ ಬಲವಂತವಾಗಿ ಕರೆದುಕೊಂಡು ಸಹಿ ಮಾಡಿಸುತ್ತಿದ್ದಾರೆಂಬ ಅಂಶ ನಮಗೆ ಗೊತ್ತಿರಲಿಲ್ಲ. ನನಗೆ ಈ ಬಗ್ಗೆ **1** ಮತ್ತು **5** ನೇ ಪ್ರತಿವಾದಿಗಳು ಉಳುಮೆ ಮಾಡಲು ಬಂದಾಗ ತಿಳಿದಿರುತ್ತದೆ. ಯಾವ ವರ್ಷ ತಿಳಿಯಿತು ಎಂದರೆ ನೆನಪಿಲ್ಲ. ದಿನಾಂಕಃ **20.02.2008** ರಂದು ನಾವು ಸ್ವಇಚ್ಛೆಯಿಂದ ಸಬ್ ರಿಜಿಸ್ಟರ್ ಕಚೇರಿ ಹೋಗಿ ವಿಭಾಗ ಪತ್ರಕ್ಕೆ ಸಹಿ ಮಾಡಿದ್ದೇವೆ ಎಂದರೆ ಸರಿ.

**2008** ರ ವಿಭಾಗದ ನಂತರ ನಾವೆಲ್ಲರೂ ನಮ್ಮ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ಅಂದಿನಿಂದ ನಾನು ಒಂದು ಎಕರೆ ಜಮೀನಿನಲ್ಲಿ ಸ್ವಾದೀನ ಹೊಂದಿದ್ದೇನೆ ಎಂದರೆ ಸರಿ. ಅದೇ ರೀತಿ **1** ನೇ ಪ್ರತಿವಾದಿಯು **1** ಎಕರೆ ಯಲ್ಲಿ, **2** ನೇ ಪ್ರತಿವಾದಿಯು **2** ಎಕರೆ **5** ಗುಂಟೆ, **3** ನೇ ಪ್ರತಿವಾದಿಯು **2** ಗುಂಟೆ, **4** ನೇ ಪ್ರತಿವಾದಿ **2** ಗುಂಟೆ, **5** ನೇ ಪ್ರತಿವಾದಿಯು **2** ಗುಂಟೆ ಅವರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಅದರಂತೆ ಅವರೆಲ್ಲಾ ಸದರಿ ವಿಸ್ತೀರ್ಣದಲ್ಲಿ ಪ್ರತ್ಯೇಕ ಸ್ವಾದೀನ ಹೊಂದಿದ್ದಾರೆ ಎಂದರೆ ಸರಿಯಲ್ಲ ನಾವು ವಾದಿಯರೆ ಸ್ವಾದೀನ ಹೊಂದಿದ್ದೇವೆ. ವಿಭಾಗ ಪತ್ರದ ಆಧಾರದ ಮೇಲೆ ಆದ ಎಂ ಆರ್ **14/2007–08** ರ ಆದೇಶವನ್ನು ಎಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಿರಾ? ಎಂದರೆ ಇಲ್ಲ.

ದಿನಾಂಕಃ **20.02.2008** ರ ವಿಭಾಗಕ್ಕೂ ಪೂರ್ವದಲ್ಲಿ ನನ್ನ ಗಂಡ ಮುನಿಯಪ್ಪ ನವರು ಶಿವಪ್ಪನವರ ವಿರುದ್ಧ ದೇವನಹಳ್ಳಿ ನ್ಯಾಯಾಲಯದಲ್ಲಿ ಆರ್ ಎ **129/2006** ರಲ್ಲಿ ಕೇಸು ಹಾಕಿದ್ದರು ಎಂದರೆ ಸರಿ. ದಿನಾಂಕಃ **30.04.2007** ರಲ್ಲಿ ನನ್ನ ಗಂಡ ಮೃತ ಪಟ್ಟರು ಎಂದರೆ ಸರಿ. ಸದರಿ ಅಪೀಲಿನಲ್ಲಿ **1** ನೇ ವಾದಿಯು ಈ ಕೇಸಿನ

ವಾದಿಯರು ಹಾಗೂ 1 ನೇ ಪ್ರತಿವಾದಿಯನ್ನು ಮುನಿಯಪ್ಪನವರ ವಾರಸುದಾರರು ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಅರ್ಜಿಯ ಪ್ರಮಾಣ ಪತ್ರದಲ್ಲಿ ಮುನಿತಾಯಮ್ಮನವರು ರಾಮಾಂಜುನಪ್ಪ ನನ್ನ ಸಾಕು ಮಗ ಎಂದು ತಿಳಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿರುತ್ತದೆ ಎಂದರೆ ಗೊತ್ತಿಲ್ಲ. ದಿನಾಂಕಃ **12.02.2008** ರಂದು ನಾವು ಮೂರು ಜನ ವಾದಿಯರು ಮನೆಯ ಆಸ್ತಿಯನ್ನು **2** ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ದಿನಾಂಕಃ **12.02.2008** ಹಾಗೂ ದಿನಾಂಕಃ **20.02.2008** ರ ಪತ್ರವನ್ನು ಒಬ್ಬರೆ ಪತ್ರ ಬರಹಗಾರರಾದ ಹನುಮಂತಯ್ಯ ಬರೆದಿದ್ದಾರೆ ಎಂದರೆ ಗೊತ್ತಿಲ್ಲ. ಈ ಎರಡು ಪತ್ರಗಳನ್ನು ನಾನು ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. **2** ನೇ ಪ್ರತಿವಾದಿಯೇ ಎರಡು ಪತ್ರವನ್ನು ಒಬ್ಬರೆ ಪತ್ರ ಬರಹಗಾರರ ಮೂಲಕ ಬರೆಸಿದ್ದಾರೆ ಎಂದರೆ ಗೊತ್ತಿಲ್ಲ.

ದಿನಾಂಕಃ **06.06.2011** ರಂದು ನಾವು ವಾದಿಯರು ಸೇರಿ ಸುರೇಶ್ ಎಂಬುವವರಿಗೆ ನಿವೇಶನವನ್ನು ಮಾರಾಟ ಮಾಡಿ ಕ್ರಯ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಸದರಿ ಪತ್ರಕ್ಕೆ ಸಾಕ್ಷಿಯಾಗಿ **2** ನೇ ಪ್ರತಿವಾದಿ ಮತ್ತು **4** ನೇ ಪ್ರತಿವಾದಿ ಸಹಿ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯನ್ನು **2** ನೇ ಪ್ರತಿವಾದಿಯು ಹೊಡೆಯಬೇಕಂಬ ಉದ್ದೇಶದಿಂದ ನಮ್ಮ ಮೂಲಕ ಈ ಸುಳ್ಳು ಕೇಸು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ಪ್ರತಿವಾದಿಯರು ಸೇರಿ ನನ್ನ ಆಸ್ತಿ ಹೊಡೆಯಲು ಈ ರೀತಿ ಪತ್ರ ಮಾಡಿದ್ದಾರೆ . ನಾನು **2** ನೇ ಪ್ರತಿವಾದಿಯೊಂದಿಗೆ ವಿಶ್ವಾಸದಿಂದ ಇದ್ದೇನೆ ಹಾಗೂ ನಮ್ಮ ಎಲ್ಲಾ ಆಗು ಹೋಗುಗಳನ್ನು ಅವರೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿ ನಮ್ಮ ಸಾಕು ಮಗನಾಗಿದ್ದರೂ ಕೂಡ ಅವರು ಸಾಕು ಮಗನಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ ಎಸ್ ನಂ.**247/2013**

ಪಿಡಬ್ಲ್ಯೂ.**1**

ಈ ಹಂತದಲ್ಲಿ **3** ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರು ಹಾಜರಾಗಿದ್ದರಿಂದ **3** ನೇ ಪ್ರತಿವಾದಿ ಪರ ಈ ಸಾಕ್ಷಿಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.